ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1346**
ಸದಸ್ಯರ ಹೆಸರು	**ಶ್ರೀ ಕಾಂತರಾಜ್ (ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**
ಉತ್ತರಿಸಬೇಕಾದ ದಿನಾಂಕ	**15.03.2021**
ಉತ್ತರಿಸಬೇಕಾದ ಸಚಿವರು	**ಮಾನ್ಯ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು**
ಪ್ರಶ್ನೆ	**ಉತ್ತರ**
ಅ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವ್ಯಾಪ್ತಿಯಡಿ ಹಾಲಿ ಸ್ಥಾಪಿತವಾಗಿರುವ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆ/ ಉದ್ಯಮಗಳು ಯಾವುವು; (ಉದ್ಯಮದ ಹೆಸರು, ಸ್ಥಾಪನೆಗೊಂಡ ವರ್ಷ, ಉದ್ಯಮದ ವಿಳಾಸ, ವಿವರದೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)	ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/ನಿರ್ದೇಶನಾಲಯದ ಅಧೀನ/ವ್ಯಾಪ್ತಿಯಡಿ ಈ ಕೆಳಕಂಡ ಹಾಲಿ ಸ್ಥಾಪಿತವಾಗಿರುವ ಸರ್ಕಾರಿ/ಖಾಸಗಿ ಸಂಸ್ಥೆ/ಉದ್ಯಮದ ಹೆಸರು, ಸ್ಥಾಪನೆಗೊಂಡ ವರ್ಷ, ಉದ್ಯಮದ ವಿಳಾಸದ ವಿವರವನ್ನು **ಅನುಬಂಧ-1** ರಲ್ಲಿರಿಸಿದೆ.
ಆ) ಈ 3 ಇಲಾಖೆಗಳಡಿ ಅನುದಾನ ಪಡೆದ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆ/ ಉದ್ಯಮಗಳು ಯಾವುವು; ಇವುಗಳಲ್ಲಿ ಎಷ್ಟು ಸ್ಥಳೀಯ ಕನ್ನಡಿಗರಿಗೆ ಕೆಲಸ ನೀಡಲಾಗಿರುತ್ತದೆ; (ಪಡೆದ ಅನುದಾನದ ವಿವರದೊಂದಿಗೆ, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಅನುದಾನ ಪಡೆದ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆ/ ಉದ್ಯಮಗಳು ಹಾಗೂ ಸ್ಥಳೀಯ ಕನ್ನಡಿಗರಿಗೆ ಕೆಲಸ ನೀಡಲಾಗಿರುವ ಮಾಹಿತಿಯನ್ನು **ಅನುಬಂಧ-1** ರಲ್ಲಿರಿಸಿದೆ.
ಇ) ಈ ಉದ್ಯಮಗಳು ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಎಷ್ಟು ಅನುದಾನವನ್ನು ಮೀಸಲಿಟ್ಟಿವೆ; ಹಾಗೂ ಎಷ್ಟು ಹಣ ಖರ್ಚು ಮಾಡಿವೆ? (ವಿವರವಾದ ಮಾಹಿತಿ ನೀಡುವುದು)	ಇಲಾಖೆಯಲ್ಲಿ ಕಿಯೋನಿಕ್ಸ್ ಸಂಸ್ಥೆಯು ಮಾತ್ರ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ 2020-21ನೇ ಸಾಲಿನಲ್ಲಿ ರೂ.37.81 ಲಕ್ಷ ಅನುದಾನವನ್ನು ಮೀಸಲಿಟ್ಟಿದ್ದು, ಹಣ ಖರ್ಚು ಮಾಡಿರುವ ಮಾಹಿತಿಯನ್ನು **ಅನುಬಂಧ-2** ರಲ್ಲಿರಿಸಿದೆ.

ಐಟಿಬಿಟಿ 18 ಎಲ್ ಸಿಎಂ 2021

(ಡಾ|| ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ,
ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅನುಬಂಧ-1

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ಕ್ರ.ಸಂ	ಇಲಾಖೆಯಡಿ ಸ್ಥಾಪಿಸಲಾಗಿರುವ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆ / ಉದ್ಯಮಗಳು ವಿಳಾಸ ಮತ್ತು ಸ್ಥಾಪಿಸಿದ ವರ್ಷ:	2020-21ನೇ ಸಾಲಿನಲ್ಲಿ ಒದಗಿಸಲಾದ ಅನುದಾನದ ವಿವರ	ಕೆಲಸ ನಿರ್ವಹಿಸುತ್ತಿರುವ ಸ್ಥಳೀಯ ಕನ್ನಡಿಗರ ಸಂಖ್ಯೆ
1	**ಕರ್ನಾಟಕ ನಾವಿನ್ಯತೆ ಮತ್ತು ತಂತ್ರಜ್ಞಾನ (ಕಿಟ್ಸ್) ಸೊಸೈಟಿ**- ನಾಲ್ಕನೇ ಮಹಡಿ, ಟಿಟಿಎಂಸಿ-ಬಿ ಬ್ಲಾಕ್, ಬಿಎಂಟಿಸಿ ಕೇಂದ್ರ ಕಛೇರಿ ಕಟ್ಟಡ, ಶಾಂತಿನಗರ, ಬೆಂಗಳೂರು-560027 ದೂರವಾಣಿ ಸಂ: 080 22231006/8 ಸ್ಥಾಪನೆಯಾದ ವರ್ಷ-2000	ರೂ. 28.00 ಕೋಟಿ	ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ಸ್ಥಳೀಯ ಕನ್ನಡಿಗರಾಗಿರುತ್ತಾರೆ.
2	**ಕಿಯೋನಿಕ್ಸ್ (ಸಾರ್ವಜನಿಕ ನಿಗಮ)**- 2ನೇ ಮಹಡಿ, ಟಿಟಿಎಂಸಿ-ಎ ಬ್ಲಾಕ್, ಬಿಎಂಟಿಸಿ ಕೇಂದ್ರ ಕಛೇರಿ ಕಟ್ಟಡ, ಶಾಂತಿನಗರ, ಬೆಂಗಳೂರು-560027 ದೂರವಾಣಿ ಸಂ: 080 22225645 ಸ್ಥಾಪನೆಯಾದ ವರ್ಷ-1976	ರೂ. 100.00 ಲಕ್ಷಗಳು	ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ಸ್ಥಳೀಯ ಕನ್ನಡಿಗರಾಗಿರುತ್ತಾರೆ.
3	**ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್ (ಬಿಬಿಸಿ) (ಸೆಕ್ಷನ್-8 ಕಂಪನಿ)**- ಬೆಂಗಳೂರು ಹೆಲಿಕ್ಸ್ ಬಯೋಟೆಕ್ ಪಾರ್ಕ್, ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್-1, ಬೆಂಗಳೂರು-560100 ದೂರವಾಣಿ ಸಂ: 080-28522280-90 ಸ್ಥಾಪನೆಯಾದ ವರ್ಷ-2015	ರೂ. 110.00 ಲಕ್ಷಗಳು	16 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
4	**ಮಾನವ ತಳಿ ಶಾಸ್ತ್ರ(ಸಿ.ಹೆಚ್.ಜಿ)**- ಬಯೋಟೆಕ್ ಪಾರ್ಕ್, ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್-1, ಬೆಂಗಳೂರು-560100 ದೂರವಾಣಿ ಸಂ: 91-80-21832/ 28521833/2853596 ಸ್ಥಾಪನೆಯಾದ ವರ್ಷ-1998	ರೂ. 250.00 ಲಕ್ಷಗಳು	20 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
5	**ಜೈವಿಕ ಮಾಹಿತಿ ಮತ್ತು ಅನ್ವಯಿಕ ಜೈವಿಕ ತಂತ್ರಜ್ಞಾನ ಸಂಸ್ಥೆ(ಐಬಿಎಬಿ)**- ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್-1, ಬೆಂಗಳೂರು-100 ದೂರವಾಣಿ ಸಂ: 080 2852 8900/ 01/02 ಸ್ಥಾಪನೆಯಾದ ವರ್ಷ-2000	ರೂ. 600.00 ಲಕ್ಷಗಳು	ಶೇಕಡ. 70 ರಷ್ಟು ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
6	**ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ(ಐಐಐಟಿ-ಬಿ):** ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್-1, ಬೆಂಗಳೂರು-100 ದೂರವಾಣಿ ಸಂ: +91 80 4140 7777/ 2852 7627 ಸ್ಥಾಪನೆಯಾದ ವರ್ಷ-1999	ರೂ. 195.00 ಲಕ್ಷಗಳು	49 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
7	**ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ(ಐಐಐಟಿ-ಡಿ):** 3ನೇ ಮಹಡಿ, ಐಟಿ ಪರ್ಕ್ ಗ್ಲಾಸ್ ಹೌಸ್ ಎದುರು, ಹುಬ್ಬಳ್ಳಿ-580029 ದೂರವಾಣಿ ಸಂ: +91 8362250879 ಸ್ಥಾಪನೆಯಾದ ವರ್ಷ-2015	ರೂ. 1270.00 ಲಕ್ಷಗಳು	54 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
8	**ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ-ಹೆಚ್)(ರಾಯಚೂರು):** ಕಂದಿ, ಸಂಗಾರೆಡ್ಡಿ-502285 ತೆಲಂಗಾಣ ಸ್ಥಾಪನೆಯಾದ ವರ್ಷ-2020	ರೂ. 735.00 ಲಕ್ಷಗಳು	ಸದರಿ ಸಂಸ್ಥೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯ ರೂಪಕ್ಕೆ ಬಂದಿರುವುದಿಲ್ಲ.

9	**ಮೈಸೂರಿನಲ್ಲಿ ಬ್ರೌನ್ ಫೀಲ್ಡ್ ಇ.ಎಸ್.ಡಿ.ಎಮ್ ಕ್ಲಸ್ಟರ್(ಸಿ.ಎಫ್.ಸಿ):** ಮೈಸೂರು ಇಎಸ್ ಡಿಎಂ ಕ್ಲಸ್ಟರ್ ಪ್ರೈ ಲಿ ಪ್ಲಾಟ್ ಸಂಖ್ಯೆ: 360, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹೆಬ್ಬಾಲ್, ಮೈಸೂರು 570018 ಕಂಪೆನಿಗಳ ಕಾಯ್ದೆ, 2013ರಡಿಯಲ್ಲಿ ಸಂಯೋಜಿಸಲ್ಪಟ್ಟ ಕಂಪನಿ	-	ಒಟ್ಟು ಉದ್ಯೋಗಿಗಳಲ್ಲಿ ಶೇ.50 ರಷ್ಟು ಕರ್ನಾಟಕದವರಿರಬೇಕೆಂಬ ಷರತ್ತಿಗೊಳಪಟ್ಟು ಕೆ.ಇ.ಎಸ್.ಡಿ.ಎಂ ನೀತಿಯಡಿ ನೋಂದಾಯಿಸಲಾಗುತ್ತಿದೆ.
10	**ಸೆಮಿಕಂಡಕ್ಟರ್ ಫ್ಯಾಬ್ಲೆಸ್ ಉತ್ಕೃಷ್ಟತಾಕೇಂದ್ರ (SFAL):** ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರಡಿಯಲ್ಲಿ ನೋಂದಾಯಿತ ಸೊಸೈಟಿ 1 ನೇಮಹಡಿ BHive ಕಾರ್ಯಕ್ಷೇತ್ರಗಳು 29, ಎಂಜಿರಸ್ತೆ ಟ್ರಿನಿಟಿ ಮೆಟ್ರೋ ನಿಲ್ದಾಣದ ಪಕ್ಕದಲ್ಲಿ ಬೆಂಗಳೂರು - 560 001 ಸ್ಥಾಪನೆಯಾದ ವರ್ಷ- 2018	-	ಒಟ್ಟು ಉದ್ಯೋಗಿಗಳಲ್ಲಿ ಶೇ.50 ರಷ್ಟು ಕರ್ನಾಟಕದವರಿರಬೇಕೆಂಬ ಷರತ್ತಿಗೊಳಪಟ್ಟು ಕೆ.ಇ.ಎಸ್.ಡಿ.ಎಂ ನೀತಿಯಡಿ ನೋಂದಾಯಿಸಲಾಗುತ್ತಿದೆ.
11	**ಕರ್ನಾಟಕ ಡಿಜಿಟಲ್ ಎಕೋನಾಮಿ ಮಿಷನ್ (ಕೆಡಿಇಎಮ್):** ಸಾರ್ವಜನಿಕ- ಖಾಸಗೀ ಸಹಭಾಗಿತ್ವದಲ್ಲಿ 'Karnataka Digital Economy Mission'ನ್ನು ಸೆಕ್ಷನ್ 8 ಕಂಪನಿಯಾಗಿ ನೊಂದಣಿಯಾಗಿರುತ್ತದೆ.	-	ಸದರಿ ಸಂಸ್ಥೆಯು ಆರಂಭಿಕ ಹಂತದಲ್ಲಿದೆ.
	ವಿಜ್ಞಾನ ಮತ್ತು ತಂತ್ರಜ್ಞಾನ		
12	**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್),** 3ನೇ ಮಹಡಿ, ವಿಜ್ಞಾನ ಭವನ, 24/2, 21ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ (ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ), ಬೆಂಗಳೂರು- 560 070 ಸ್ಥಾಪನೆಯಾದ ವರ್ಷ- 2012	ರೂ. 350.00 ಲಕ್ಷಗಳು	52 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
13	**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕ.ವಿ.ತಂ.ಅ.),** ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ ತೋಟಗಾರಿಕಾ ಮಹಾವಿದ್ಯಾಲಯದ ಆವರಣ ಜಿ.ಕೆ.ವಿ.ಕೆ., ಮೇಜರ್ ಸಂದೀಪ ಉನ್ನಿಕೃಷ್ಣನ್ ರಸ್ತೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು – 560097, ಸ್ಥಾಪನೆಯಾದ ವರ್ಷ- 2005	ರೂ. 81.25 ಲಕ್ಷಗಳು	16 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
14	**ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, (ಕೆ.ಎಸ್.ಸಿ.ಎಸ್.ಟಿ.),** ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು- 560 012 ಸ್ಥಾಪನೆಯಾದ ವರ್ಷ-1975	ರೂ. 125.00 ಲಕ್ಷಗಳು	79 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
15	**ಜವಾಹರಲಾಲ್ ನೆಹರು ತಾರಾಲಯ**, ಟಿ. ಚೌಡಯ್ಯರಸ್ತೆ, ಹೈಗ್ರೌಂಡ್ಸ್ ಬೆಂಗಳೂರು-560 001, ಸ್ಥಾಪನೆಯಾದ ವರ್ಷ-1989	ರೂ. 112.50 ಲಕ್ಷಗಳು	17 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ

16	**ವಿಜ್ಞಾನ ಗ್ಯಾಲರಿ ಬೆಂಗಳೂರು**, ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರ, ಜಿ.ಕೆ.ವಿ.ಕೆ. ಕ್ಯಾಂಪಸ್, ಬಳ್ಳಾರಿರಸ್ತೆ, ಬೆಂಗಳೂರು- 560 065, ಸ್ಥಾಪನೆಯಾದ ವರ್ಷ- 2015	ರೂ. 500 ಲಕ್ಷಗಳು	ಇಬ್ಬರು(2) ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
17	**ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ**, ಆಡಳಿತಕಛೇರಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ, ಮೂಡಶೆಡ್ಡೆಅಂಚೆ, ಮಂಗಳೂರು-575 028 ಸ್ಥಾಪನೆಯಾದ ವರ್ಷ- 2005	ರೂ. 64.05 ಲಕ್ಷಗಳು	17 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
18	**ಧಾರವಾಡ ಪ್ರಾದೇಶಿಕ ವಿಜ್ಞಾನಕೇಂದ್ರ**, ಕರ್ನಾಟಕ ವಿಶ್ವವಿದ್ಯಾಲಯ ಆವರಣ ಪಾವಟೆ ನಗರ, ಧಾರವಾಡ- 580 003, ಸ್ಥಾಪನೆಯಾದ ವರ್ಷ- 2012	ರೂ. 140.66 ಲಕ್ಷಗಳು	27 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
19	**ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನಕೇಂದ್ರ**, ಜಿಲ್ಲಾಧಿಕಾರಿಗಳ ಕಾರ್ಯಾಲಯ ಸ್ಟೇಷನ್ ರಸ್ತೆ, ಬಳ್ಳಾರಿ ಜಿಲ್ಲೆ, ಬಳ್ಳಾರಿ -583 101 ಸ್ಥಾಪನೆಯಾದ ವರ್ಷ- 2014	ರೂ. 15.00 ಲಕ್ಷಗಳು	11 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
20	**ರಾಯಚೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ**, ಸೈನ್ಸ್ ಎಜುಕೇಷನ್ ಟ್ರಸ್ಟ್, ರಾಷ್ಟ್ರಕವಿ ಕುವೆಂಪುವನ, ವಿಜ್ಞಾನಬೆಟ್ಟ, ಮಂತ್ರಾಲಯರಸ್ತೆ, ರಾಯಚೂರು – 584 103 ಸ್ಥಾಪನೆಯಾದ ವರ್ಷ- 2015	ರೂ. 10.00 ಲಕ್ಷಗಳು	05 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
21	**ಕಾರವಾರ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ**, ಕೈಗಾನಿಲಯ, ಕೋಡಿಬಾಗ, ಕಾರವಾರ-581 303 ಸ್ಥಾಪನೆಯಾದ ವರ್ಷ- 2003	ರೂ. 5.00 ಲಕ್ಷಗಳು	06 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ
22	**ಡಾ.ಹೆಚ್. ನರಸಿಂಹಯ್ಯ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ**, ಹೊಸೂರು, ಗೌರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರಜಿಲ್ಲೆ – 561 210 ಸ್ಥಾಪನೆಯಾದ ವರ್ಷ 2019	ರೂ. 5.00 ಲಕ್ಷಗಳು	08 ಜನ ಸ್ಥಳೀಯ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ

ಅನುಬಂಧ - 2

2020-21 ಹಣಕಾಸು ವರ್ಷದಲ್ಲಿ ಕಿಯೋನಿಕ್ಸ್ ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನಿಧಿ ಮೀಸಲಾತಿ ಮತ್ತು ಖರ್ಚು ಮಾಡಲಾದ ವಿವರದ ಬಗ್ಗೆ

ಕಿಯೋನಿಕ್ಸ್ ಸಂಸ್ಥೆಯು ವಿವಿಧ ಸಂಸ್ಥೆಗಳಿಗೆ 2020-21 ಹಣಕಾಸು ವರ್ಷದಲ್ಲಿ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ 37,81,890.00 ಲಕ್ಷ ರೂಗಳನ್ನು ಮೀಸಲಿಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಖರ್ಚು ಮಾಡಲಾದ ಹಣದ ವಿವರ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಕ್ರ.ಸಂ	ಫಲಾನುಭವಿಗಳ ವಿವರ	ಯೋಜನೆಯ ವಿವರ	ಮಂಜೂರಾದ ಹಣ
01	ಅಧ್ಯಕ್ಷರು ಮಂಗಳೂರು ಒನ್ ಶಾಲೆ (ಹೀಪಲ್ಸ್ ಟ್ರಸ್ಟಿನ ಘಟಕ) ತೊಕ್ಕೊಟ್ಟು, ಮಂಗಳೂರು-575 017	ಶಾಲೆಗೆ ಅವಶ್ಯವಿರುವ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಲು	5.00 ಲಕ್ಷ
02	ಧರ್ಮಸ್ಥಳ ಶ್ರೀ ರಾಮಕ್ಷೇತ್ರ ಉಡುಪಿ ಸಮಿತಿ ಎಜ್ಯುಕೇಶನಲ್ ಟ್ರಸ್ಟ್ (ರಿ),ಉಡುಪಿ	ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್ ಮತ್ತು ಸ್ಕಾನರ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು	5.00 ಲಕ್ಷ
03	ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ),ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲ್ಲೂಕು, ದ.ಕ	ಕಂಪ್ಯೂಟರ್ ಪ್ರಯೋಗಾಲಯಕ್ಕೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್ ಮತ್ತು ಸ್ಕಾನರ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು	5.00 ಲಕ್ಷ
04	ಜ್ಞಾನಜ್ಯೋತಿ ಸೇವಾ ಟ್ರಸ್ಟ್, ಹೊಸದುರ್ಗ ರೋಡ್, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ	ಶಾಲೆಯ ಪ್ರಯೋಗಾಲಯಗಳಿಗೆ ಅವಶ್ಯವಿರುವ ಕಂಪ್ಯೂಟರ್ ಸೆಂಟರ್, ಸ್ಮಾರ್ಟ ಬೋರ್ಡ ಮತ್ತು ಇತರೆ ಲ್ಯಾಬ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು	5.00 ಲಕ್ಷ
05	ಪಬ್ಲಿಕ್ ಟಿವಿ ಮತ್ತು ರೋಟರಿ ಇಂಟರ್ ನ್ಯಾಶನಲ್ ಸಂಸ್ಥೆ ಬೆಂಗಳೂರು	ಗ್ರಾಮೀಣ ಭಾಗದ ಬಡ SSLCವಿದ್ಯಾರ್ಥಿಗಳಿಗೆ "ಜ್ಞಾನ ದೀವಿಗೆ" ಎಂಬ ಹೆಸರಿನಲ್ಲಿ ಟ್ಯಾಬ್ ಮೂಲಕ ಡಿಜಿಟಲ್ ಶಿಕ್ಷಣ ನೀಡಲು ನೆರವು ಕೋರಿರುತ್ತಾರೆ	5.00 ಲಕ್ಷ
		ಖರ್ಚಾದ ಒಟ್ಟು ಹಣ	25.00 ಲಕ್ಷ

M...
KARNATAKA STATE ELECTRONICS DEVELOPMENT CORPORATION LTD,
2nd Floor, TTMC 'A' Block, BMTC
Shanthinagar, K.H.Road, Bengaluru - 560027